SOFA SETS - KITCHENS
LIVING ROOMS
DINING ROOMS
GARDEN FURNITURE
HOME DECOR
& MATTRESSES
Space Oak
LUXURY FURNITURE
KUSUGAL ROAD, KESHWAPUR, HUBLI. TEL. 0836 2369964

■ ಮಂಗಳೂರು ■ ಹುಬ್ಬಳ್ಳಿ ■ ಕಲಬುರಗಿ ■ ಬೆಂಗಳೂರು ■ ದಾವಣಗೆರೆ

ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ

ಎಂಟು ದಶಕದ ನಂಟು

■ ಸಂಪುಟ 59 ■ ಸಂಚಿಕೆ 16 ಶುಕ್ರವಾರ, 10, ಫೆಬ್ರವರಿ, 2017 ಪುಟ 14 +4 ರೂ. 5-00

# ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ಬಜೆಟ್ ಚರ್ಚಾಕೂಟ




ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ಬಜೆಟ್ ಬಗ್ಗೆ ಚರ್ಚೆ ನಡೆಯಿತು.

**ಮಂಗಳೂರು:** ಅಡ್ಯಾರಿನ ಸಹ್ಯಾದ್ರಿ ಕಾಲೇಜ್ ಅಫ್ ಇಂಜಿನಿಯರಿಂಗ್ ಹಾಗೂ ಮ್ಯಾನೇಜ್‌ಮೆಂಟ್, ಬಿಸ್‌ನೆಸ್ ಇದರ ಉದ್ಯಮಾಡಳಿತ ವಿಭಾಗದ ಪ್ರಥಮ ವರ್ಷದ ವಿದ್ಯಾರ್ಥಿಗಳಾದ ಆತ್ಮೀಯ, ಕ್ಷಮ, ಸುಪ್ರಿಯಾ, ಹರ್ಷ, ಕೋಮಲ್, ಅರ್ಪಿತ, ಶಕೀರ್, ನಿಶಾನ್ ಮತ್ತೆ ನಿಧಿ ಫ್ರ್ಯಾಂಕ್ ಅವರು ವಿತ್ತ ಸಚಿವ ಅರುಣ್ ಜೇಟ್ಲಿ ಅವರು ಮಂಡಿಸಿದ ಕೇಂದ್ರ ಬಜೆಟ್‌ನ ಕೃಷಿ, ಹಳ್ಳಿ, ರೇಲ್ವೆ, ಶಿಕ್ಷಣ, ಆರೋಗ್ಯ, ರಕ್ಷಣೆ ಇತ್ಯಾದಿ ವಿಚಾರಗಳ ಬಗ್ಗೆ ಮುಕ್ತ ಸಂವಾದ ನಡೆಸಿದರು.

ವಿದ್ಯಾರ್ಥಿಗಳು ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳುವುದಕ್ಕೆ ಸಹ್ಯಾದ್ರಿ ಕಾಲೇಜು ಈ ವೇದಿಕೆ ಕಲ್ಪಿಸಿದೆ. ಮಂಗಳೂರು ವಿಶ್ವ ವಿದ್ಯಾಲಯದ ಆರ್ಥಿಕ ತಜ್ಞ ಡಾ.ಶ್ರೀಪತಿ ಕಲ್ಲುರಾಯ, ಲೆಕ್ಕ ಪರಿಶೋಧಕರಾದ ಕೆ.ಪ್ರಭೋಧ್ ನಾಯಕ್ ಹಾಗೂ ಕೆ.ಸತೀಶ್ ಪೈ ಉಪಸ್ಥಿತರಿದ್ದರು.

ನಿರ್ದೇಶಕ ಡಾ.ವಿಶಾಲ್ ಸಮರ್ಥ ಅತಿಥಿಗಳನ್ನು ಬರಮಾಡಿಕೊಂಡರು. ಪ್ರಾಂಶುಪಾಲ ಡಾ.ಉಮೇಶ್ ಭೂಷಿ ಬಜೆಟ್ ವಿಷಯದಲ್ಲಿ ಟಿಪ್ಪಣಿ ನೀಡಿದರು.

ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಮಂಜುನಾಥ್ ಭಂಡಾರಿ ಈ ಚೆರ್ಚಾಕೂಟದಲ್ಲಿ ಭಾಗವಹಿಸಿದ ಯುವ ವಿದ್ಯಾರ್ಥಿಗಳನ್ನು ಪ್ರಶಂಸಿದರು. ಪ್ರೊ.ಬಿ.ರಾಘವೇಂದ್ರ ಪ್ರಭು ವಂದಿಸಿದರು.

ಶುಕ್ರವಾರ,10 ಫೆಬ್ರವರಿ 2017 | ಪುಟಗಳು: 16+4+6 | ಬೆಲೆ: ₹ 5.00
www.vijaykarnataka.com
ಸಂಪುಟ: 16 | ಸಂಚಿಕೆ: 196

VK

ವಿಜಯ ಕರ್ನಾಟಕ

ಮಂಗಳೂರು | ಬೆಂಗಳೂರು | ಮೈಸೂರು | ಹುಬ್ಬಳ್ಳಿ | ಶಿವಮೊಗ್ಗ | ಬಾಗಲಕೋಟ | ಕಲಬುರಗಿ



ಕೋಸ್ಟಲ್‌ವುಡ್ ಕನ್ನಡದಲ್ಲಿ ಕರಾವಳಿಯ ಕಾವ್ಯ

59 ಜನರ ಬಲಿ ಪಡೆದ ಉಪಹಾರ್ ದುರಂತ: ರಿಯಲ್ ಎಸ್ಟೇಟ್ ಕುಳ ಅನ್ಸಾಲ್‌ಗೆ ಒಂದೇ ವರ್ಷ ಜೈಲು ಶಿಕ್ಷೆ P12

ಬಾಂಗ್ಲಾ ವಿರುದ್ಧ ಟೆಸ್ಟ್: ಮುರಳಿ ವಿಜಯ್, ಶತಕ, ಭಾರತ 3 ವಿಕೆಟ್‌ಗೆ 356 ರನ್ P14

# 18ರಂದು ಕ್ವೆಸ್ಟ್ ಫಾರ್ ದಿ ಬೆಸ್ಟ್ ಎಂಜಿನಿಯರಿಂಗ್ ಮೈಂಡ್ಸ್

**ವಿಕ ಸುದ್ದಿಲೋಕ** ಮಂಗಳೂರು

ವಿದ್ಯಾರ್ಥಿಗಳು, ವೃತ್ತಿಪರರು ಹಾಗೂ ಸ್ಟಾರ್ಟ್ ಅಪ್ ಆರಂಭಿಸುವವರಿಗೆ ನಾನಾ ಬಗೆಯ ಸ್ಪರ್ಧೆಗಳನ್ನು ಒಳಗೊಂಡ ಕೋಡ್‌ಕ್ವೆಸ್ಟ್ 2ಕೆ17 ಸ್ಪರ್ಧೆ ಫೆ.18ರಂದು ಸಹ್ಯಾದ್ರಿ ಕಾಲೇಜಿನಲ್ಲಿ ನಡೆಯಲಿದೆ.

ಈ ಸ್ಪರ್ಧೆ ಮಂಗಳೂರಿನಲ್ಲೇ ದೊಡ್ಡ ಹ್ಯಾಕಥಾನ್ ಆಗಿದ್ದು, ವಿದ್ಯಾರ್ಥಿಗಳು, ವೃತ್ತಿಪರರು ಹಾಗೂ ಸ್ಟಾರ್ಟ್ ಅಪ್ ಆರಂಭಿಸುವವರಿಗೆ ಕೋಡ್‌ಕ್ವೆಸ್ಟ್ ಸ್ಪರ್ಧೆಯಲ್ಲಿ ಹ್ಯಾಕಥಾನ್, ಕಾರ್ಯಾಗಾರ, ಕೋಡಿಂಗ್ ಈವೆಂಟ್ಸ್, ತಾಂತ್ರಿಕ ಚರ್ಚೆಗಳು ನಡೆಯಲಿದ್ದು, ಸಮಸ್ಯೆಗಳನ್ನು ಪರಿಹರಿಸುವುದು, ಸ್ಟಾರ್ಟ್‌ಅಪ್ಸ್, ಕಾರ್ಪೊರೇಟ್ ಹಾಗೂ ಹವ್ಯಾಸಿ ಬರಹಗಾರರು ಹಾಗೂ ಮೊಜಿಲ್ಲಾ ಹಾಗೂ ಐಬಿಎಂ ಪಾಲುದಾರ ಗುರುಗಳಿಗೆ ಈ ಸ್ಪರ್ಧೆಯಲ್ಲಿ 1 ಲಕ್ಷ ರೂ. ಬಹುಮಾನ ಗೆಲ್ಲುವ ಸದಾವಕಾಶವಿದೆ.

ಈ ಸ್ಪರ್ಧೆ ಡಿಟಿಲ್ಯಾಬ್ಸ್ ಹಾಗೂ ಹೋಸ್ಟ್ ಜೈರೊವತಿಯಿಂದ ಫೆ.18ರಂದು ಬೆಳಗ್ಗೆ 9ಗಂಟೆಗೆ ಆರಂಭವಾಗಿ 36 ಗಂಟೆಗಳ ಕಾಲ 2 ದಿವಸ ಹಾಗೂ 1 ರಾತ್ರಿ ನಡೆಯಲಿದೆ.

ವಿವಿಧ ಉದ್ಯಮಗಳಲ್ಲಿ ಕೆಲಸ ಮಾಡುವವರನ್ನು ಭೇಟಿ ಮಾಡಲು ಹ್ಯಾಕಥಾನ್ ಅವಕಾಶ ಕಲ್ಪಿಸಿದ್ದು, ನೂತನ ತಂತ್ರಜ್ಞಾನದಲ್ಲಿ ಹೊಸದಾಗಿ ಕಂಪನಿ ಆರಂಭಿಸುವವರಿಗೆ ಸೂಕ್ತ ಸಲಹೆ ಪಡೆಯಲು ಅನುಕೂಲವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

www.vijaykarnataka.com
ಸಂಪುಟ: 16 | ಸಂಚಿಕೆ: 195
ಗುರುವಾರ,9 ಫೆಬ್ರವರಿ 2017 | ಪುಟಗಳು: 18+4+4(UDP6) | ಬೆಲೆ: ₹ 4.00
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ | ಚಿತ್ರದು...
PRIDE O...



# ವ್ಯವಹಾರ ಕೌಶಲ ಬಳಕೆಯ ಕಾರ್ಯಾಗಾರ

**ಮಂಗಳೂರು:** ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಪೀಪಲ್ ಮ್ಯಾನೇಜ್‌ಮೆಂಟ್ ಸಹ್ಯಾದ್ರಿ ಕಾಲೇಜು ಸಹಯೋಗದಲ್ಲಿ ಫೆ.24ರಂದು ಸನ್ನೆಗೋಲು ವ್ಯವಹಾರ ಕೌಶಲ ಕುರಿತ ಒಂದು ದಿನದ ರಾಷ್ಟ್ರೀಯ ಕಾರ್ಯಾಗಾರ ಹಮ್ಮಿಕೊಂಡಿದೆ.

ಪ್ರಸಕ್ತ ಮಾನವ ಸಂಪನ್ಮೂಲ ಪ್ರವೃತ್ತಿಯಲ್ಲಿ ವ್ಯವಹಾರ ಕೌಶಲ ಬಳಕೆ ವಿಷಯ ಕುರಿತು ಅಂದು ಬೆಳಗ್ಗೆ 9ರಿಂದ ಸಂಜೆ 5ಗಂಟೆಯವರೆಗೆ ಸಂವಾದ ನಡೆಯಲಿದ್ದು, ವ್ಯವಹಾರ ತಂತ್ರಗಳ ಬದಲಾವಣೆಯಲ್ಲಿ ಮಾನವ ಸಂಪನ್ಮೂಲ ಕಾರ್ಯ ಚಟುವಟಿಕೆಯ ಸಾಮರ್ಥ್ಯದ ಚೌಕಟ್ಟಿನ ಬದಲಾವಣೆಗೆ ಒಂದು ಹಾದಿಯನ್ನು ಈ ಸಮ್ಮೇಳನ ಹುಡುಕಿಕೊಡಲಿದ್ದು, ಸಮ್ಮೇಳನದಲ್ಲಿ ಪಾಲ್ಗೊಳ್ಳುವವರಿಗೆ ಹೊಸ ಯುಗದಲ್ಲಿ ವೃತ್ತಿಪರ ಬೆಳವಣಿಗೆಯಲ್ಲಿ ಬದಲಾವಣೆ ಹೊಂದಲು ಈ ಸಮ್ಮೇಳ ಸ್ಫೂರ್ತಿಯಾಗಲಿದೆ.

ಬಿಎಎಸ್‌ಎಫ್‌ನ ಏಷ್ಯಾದ ನಿರ್ದೇಶಕಿ ಹಾಗೂ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥೆ ಡಾ. ಲಕ್ಷ್ಮಿ ನಾಡಕರ್ಣಿ ಮುಖ್ಯಭಾಷಣ ಮಾಡಲಿದ್ದಾರೆ. ಉದ್ಯಮಗಳ ತಜ್ಞರಾದ ಮುಂಬೈನ ವಿವಿಎಫ್ ಇಂಡಿಯಾ ಮಾನಸ ಸಂಪನ್ಮೂಲ ವಿಭಾಗದ ಎಜಿಎಂ ಚಾರ್ಲಸ್ ಕರ್ವಾಲ್ಹೊ, ಕೋಚ್ ಎನ್.ಪ್ರಸಾದ್ ಮೆನನ್, ಕ್ಲಿಯರ್ ಟ್ರಿಪ್ ಪ್ರೈವೇಟ್ ಲಿಮಿಟೆಡ್‌ನ ಎನ್.ಪ್ರಸಾದ್, ಮ್ಯಾಗ್ನಮ್ ಇಂಟರ್‌ಗ್ರಾಫಿಕ್ಸ್‌ನ ವ್ಯವಹಾರ ಮುಖ್ಯಸ್ಥರಾದ ನಿವೇದಿತಾ ಮಿರಜ್‌ಕರ್, ಬಿಎಎಸ್‌ಎಫ್ ಇಂಡಿಯಾದ ವ್ಯವಹಾರ ಮುಖ್ಯಸ್ಥ ಸಿ.ಎಂ.ನಾಗರಾಜು, ಎಂಸಿಎಫ್‌ನ ಮಾನವ ಸಂನ್ಮೂಲ ವಿಭಾಗದ ಪ್ರಧಾನ ವ್ಯವಸ್ಥಾಪಕ ಪಿ.ಜೆ.ರಾಯ್, ಉಡುಪಿ ಯುಪಿಸಿಎಲ್ ಮಾನವ ಸಂಪನ್ಮೂಲ ವಿಭಾಗದ ಪ್ರಧಾನ ವ್ಯವಸ್ಥಾಪಕ ಹರಿಪ್ರಸಾದ್, ಬೆಂಗಳೂರು ಕೈಗಾರಿಕಾ ಕಾನೂನು ಸಲಹೆಗಾರ ಸುರೇಂದ್ರನಾಥ್ ಇತರರು ಪಾಲ್ಗೊಳ್ಳುವರು.

Festival Offer!!!
2BHK Manipal - 22.5lacs
2BHK Santhkette - 38lacs
2BHK Udupi City - 42lacs
(inclusive of all)
Contact
9901692215/9844615740/0820-4298989

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ಗುರುವಾರ, ಫೆಬ್ರವರಿ 9, 2017 ಬೆಲೆ: ₹ 4-00 ವಿದೇಶ ಬೆಲೆ: ₹ 5-00 ಪುಟಗಳು 14+4 (UDP

ಶಿಕ್ಷಣ | 'ಕೆಎಸ್‌ಎಚ್‌ಐಟಿಐಜಿ-2017' ಉತ್ಸವ

# ಸಹ್ಯಾದ್ರಿಗೆ ಐಐಟಿ ಬೆಸ್ಟ್ ಫ್ರೆಶರ್ಸ್ ಅವಾರ್ಡ್



ಪ್ರಶಸ್ತಿ ಪಡೆದ ವಿದ್ಯಾರ್ಥಿಗಳ ತಂಡ.

**ಅಡ್ಯಾರ್,** ಫೆ. 8: ಅಡ್ಯಾರಿನ ಸಹ್ಯಾದ್ರಿ ಎಂಜಿನಿಯರಿಂಗ್ ಮತ್ತು ಆಡಳಿತಾ ತ್ಮಕ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿಗಳು ಖರಗ್‌ಪುರದಲ್ಲಿ 'ಕೆಎಸ್‌ಎಚ್ ಐಟಿಐಜಿ-2017' ಏಷ್ಯಾದ ಅತಿ ದೊಡ್ಡ ಟೆಕ್ನೋ-ಮ್ಯಾನೇಜ್‌ಮೆಂಟ್ ಉತ್ಸವದಲ್ಲಿ ಪಾಲ್ಗೊಂಡು ಬೆಸ್ಟ್ ಫ್ರೆಷರ್ ಪ್ರಶಸ್ತಿ ಪಡೆದಿದ್ದಾರೆ.

ಕಾನ್‌ಕ್ವೆಸ್ಟ್ ಸ್ಪರ್ಧೆಯಲ್ಲಿ ಕಂಪ್ಯೂಟರ್ ವಿಷನ್ ತಂತ್ರಜ್ಞಾನ ಬಳಸಿ ರೋಬೋಟ್ ತಯಾರಿಸುವುದು, ಡ್ರೋಯ್ಡ್ ಬ್ಲಿಟ್ಸ್‌ನಲ್ಲಿ ನೀರು ಮತ್ತು ನೆಲದಲ್ಲಿ ಚಲಿಸಬಲ್ಲ ಆಂಫಿಬಿಯಸ್ ಬೋಟ್ ತಯಾರಿಕೆ ಹಾಗೂ ಬಿಕ್ಸ್ ಸ್ಪರ್ಧೆಯಲ್ಲಿ ಟೊಳ್ಳು ಮಾದರಿಯ ಪ್ರತ್ಯೇಕ ಹಾಗೂ ದೃಢವಾದ ಕೊಕ್ಕೆಯುಳ್ಳ ಮಾದರಿಯ ರೋಬೋಟ್ ತಯಾರಿಸುವುದು ಸಹಿತ ಮೂರು ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಿದ್ಯಾರ್ಥಿಗಳಾದ ಜೆಹದ್ ಮೊಹಮದ್, ರಿಯಾ ಬಾತ್ರಾ, ಮೊನಿಷಾ ತೆರ್ಕಾರ್, ವಾಸು, ಶ್ರೇಯಾ ಬಾಳಿಗಾ, ಕಿಶನ್ ಗೌಡ, ರಾಮ್‌ಕಿಶೋರ್ ಕೆ., ಹರ್ಷಿತ್ ಕುಮಾರ್, ರೋಹನ್ ಬಿ., ತೇಜಸ್ವಿ ನಿತಿನ್ ಕುಮಾರ್, ಕರಣ್ ಎಸ್. ಎಚ್., ಆದಿತ್ಯ ಸುವರ್ಣ, ಅಕ್ಷಯ್ ರಾಮ್ ಭಟ್, ಮೇಘಶ್ರೀ, ಆಕರ್ಷ್ ಶೆಟ್ಟಿ ಅವರ ತಂಡ ಪ್ರಶಸ್ತಿ ಗಳಿಸಿದೆ.

ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಸಹ್ಯಾದ್ರಿ ಎಜು ಡ್ರೀಮರ್ಸ್ ಆರ್ ಅಂಡ್ ಡಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ತರಬೇತಿ ನೀಡಿತ್ತು.